ದಿನಾಂಕ 03-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. ಎ.ಎನ್.ಆರ್. ವಕೀಲರಿಂದ

1. ನಾನು ಅಂಗನವಾಡಿ ಕಾರ್ಯಕರ್ತೆ ಎಂದು ಕೆಲಸ ಮಾಡುತ್ತೇನೆ. ನನಗೆ ಯಾವುದೇ ವ್ಯವಹಾರ ಮಾಡಿದ ಬಗ್ಗೆ ಸ್ವಲ್ಪ ಸ್ವಲ್ಪ ಮಾಹಿತಿ ಗೊತ್ತಾಗುತ್ತದೆ. ಗಂಗಣ್ಣ ಇವರು ನನಗೆ ಅಜ್ಜ ಆಗಬೇಕು. ಶಾಂತಮ್ಮ ಅಜ್ಜಿ ಆಗಬೇಕು. ಸದರಿ ಶಾಂತಮ್ಮ ಮತ್ತು ಗಂಗಣ್ಣ ಇವರಿಗೆ ಚಿದಾನಂದಪ್ಪ ಒಬ್ಬನೇ ಮಗ ಎಂದರೆ ಸರಿ. ಗಂಗಣ್ಣ ಮೃತಪಟ್ಟ ನಂತರ

ಅವರ ಆಸ್ತಿಗಳು ಅವರ ಹೆಂಡತಿ ಶಾಂತಮ್ಮ ಇವರ ಹೆಸರಿಗೆ ವರ್ಗಾವಣೆ ಆಗಿರುತ್ತವೆ ಎಂದರೆ ಸರಿಯಲ್ಲ. ಆ ಬಗ್ಗೆ ಶಾಂತಮ್ಮ ಇವರ ಹೆಸರಿನಲ್ಲಿ ಆಸ್ತಿಗಳು ವರ್ಗಾವಣೆ ಆಗಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಂತಮ್ಮ ಇವರು ದಿ: 16-10-2010 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅದೇ ವರ್ಷ ಚಿದಾನಂದಪ್ಪ ಮೃತಪಟ್ಟಿರುತ್ತಾರೆ ಎಂದರೆ ಸರಿ.

2. ದಿ: 22-03-2008 ರಂದು ನನ್ನ ಅಜ್ಜಿ ಶಾಂತಮ್ಮ, ದಾವಾ ಆಸ್ತಿಯನ್ನು ವಾದಿಗೆ ರೂ. 80,000/-ಗಳಿಗೆ ಮಾರಾಟ ಮಾಡಲು ಒಪ್ಪಿ ನಿ.ಪಿ. 10 ರಂತೆ ದಾಖಲೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇದಿನ ಸದರಿ ರೂ. 80,000/- ಪಡೆದು ನನ್ನ ಅಜ್ಜಿ ಶಾಂತಮ್ಮ ನಿ.ಪಿ. 1 ರಂತೆ ರಶೀದಿಯನ್ನು ಬರೆದುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ನಿ.ಪಿ. 10 ರ ಕರಾರು ಪತ್ರದಂತೆ, ವಾದಿ ಶಾಂತಮ್ಮ ಹಾಗೂ ಚಿದಾನಂದಪ್ಪ ಇವರಿಗೆ ಖರೀದಿ ಪತ್ರ ಬರೆದುಕೊಡುವಂತೆ ಅವರ ಜೀವಿತ ಕಾಲದಲ್ಲಿ ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ಶಾಂತಮ್ಮ ಮತ್ತು ಚಿದಾನಂದಪ್ಪ ಮೃತಪಟ್ಟ ನಂತರ ವಾದಿ ಹಾಗೂ ವಾದಿಯ ಗಂಡ ನಮಗೆ ನಿ.ಪಿ. 10 ರ ಕರಾರಿನಂತೆ ಖರೀದಿ ಪತ್ರ ಮಾಡಿಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ವಾದಿ ನಮಗೆ ನೋಟೀಸ್ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಅದಕ್ಕೆ ಉತ್ತರ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ವಾದಿ ನಿ.ಪಿ. 10 ರ ದಾಖಲೆಯಂತೆ ನಿರ್ದಿಷ್ಟ ಕರಾರು ಪಾಲನೆ ಮಾಡಲು ತಯಾರಿದ್ದು, ಆದರೆ ನಾವು ತಯಾರಿಲ್ಲ ಎಂದರೆ ಸರಿಯಲ್ಲ. ನಿ.ಪಿ. 10 ರ ದಾಖಲೆ ಬರೆದ ದಿನದಂದೇ, ದಾವಾ ಆಸ್ತಿಯ ಸ್ವಾಧೀನತೆಯನ್ನು ವಾದಿಗೆ ಬಿಟ್ಟುಕೊಟ್ಟಿರುತ್ತಾರೆ, ಅಂದಿನಿಂದ ವಾದಿಯೇ ದಾವಾ ಆಸ್ತಿಯ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

3. ದಿ: 05-01-2015 ರಂದು ದಾವಾ ಆಸ್ತಿಯನ್ನು ವರ್ಗಾವಣೆ ಮಾಡುವಂತೆ ನಮ್ಮ ತಾಯಿ ಶಂಕ್ರಮ್ಮ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಅದಕ್ಕೆ ವಾದಿ ತಕರಾರು ಸಲ್ಲಿಸಿದ್ದಳು ಎಂದರೆ ಸರಿ. ಆ ತಕರಾರಿನ ಮೇರೆಗೆ, ಪುರಸಭೆ ಅಧಿಕಾರಿಗಳು ದಾವಾ ಆಸ್ತಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿ. ಪುರಸಭೆ ಅಧಿಕಾರಿಗಳು ಪರಿಶೀಲನೆ ಮಾಡಿದ ನಂತರ ನಿ.ಪಿ. 10 ರ ದಾಖಲೆ ಆಧಾರದ ಮೇಲೆ ವಾದಿ ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿದ್ದು, ಕಾರಣ ವರ್ಗಾವಣೆ ಮಾಡಲು ಬರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿ: 05-10-2020 ರಂದು ದಾವಾ ಆಸ್ತಿಯಲ್ಲಿ ವಾದಿ ಮತ್ತು ಅವರ ಕುಟುಂಬದವರು ಮನೆ ಕಟ್ಟುತ್ತಿದ್ದು, ಅದನ್ನು ಕೇಳಲು ಹೋದಾಗ ನಮಗೆ ತೊಂದರೆ ಕೊಟ್ಟಿರುತ್ತಾರೆ ಎಂದು ನಿ.ಡಿ. 9 ರಂತೆ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಿದ್ದೇವು ಎಂದರೆ ಸರಿ. ನನ್ನ ಅಜ್ಜಿ ಶಾಂತಮ್ಮ ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿ, ರೂ. 80,000/- ನಗದು ಪಡೆದು ನಿ.ಪಿ. 1 ಮತ್ತು 10 ರಂತೆ ದಾಖಲೆ ಬರೆದುಕೊಟ್ಟಿರುತ್ತಾರೆ, ಅದಕ್ಕೆ ನನ್ನ ತಂದೆ ಚಿದಾನಂದಪ್ಪ ಒಪ್ಪಿಗೆ ಸಾಕ್ಷಿ ಎಂದು ಸಹಿ ಮಾಡಿರುತ್ತಾರೆ, ಆದರೂ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 10 ರ ದಾಖಲೆಯನ್ನು ಸಾಕ್ಷಿದಾರರಾದ ಬಣಗಾರ ಚೆನ್ನಪ್ಪ, ಮುದುಕಪ್ಪ, ರಾಮಸ್ವಾಮೀ ಮತ್ತು ಅನಂತರಾಮುಲು ಇವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿದಾರರ ಸಮಕ್ಷಮ ನಿ.ಪಿ. 1 ಮತ್ತು 10 ರ ದಾಖಲೆಗಳನ್ನು ಬರೆದುಕೊಟ್ಟು ದಾವಾ ಆಸ್ತಿಯ ಸ್ವಾಧೀನತೆಯನ್ನು ವಾದಿಗೆ ಬಿಟ್ಟುಕೊಟ್ಟಿದ್ದರೂ, ನಾವು ಸ್ವಾಧೀನತೆ ಹೊಂದಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 10 ರ ಕರಾರಿನಂತೆ, ಖರೀದಿ ಪತ್ರ ಮಾಡಿಕೊಡುವುದು ನಮ್ಮ ಜವಾಬ್ದಾರಿ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

**ಸಿಜೆ** & ಜೆಎಂಎಫ್‌ಸಿ, ನ್ಯಾಯಾಲಯ, ಮಾನವಿ.